ಅಖಿಲ ಕರ್ನಾಟಕ
# ಶಿಕ್ಷಕ ಸಮಾಚಾರ
ಜೂನ್ 2013 ಮಾಸ ಪತ್ರಿಕೆ

ಸಂಪುಟ : 35
ಸಂಚಿಕೆ : 10
ಪುಟ : 12
ಬೆಲೆ : ₹ 5/-

# ಬೆಳ್ಳಿ ಹಬ್ಬದ ಸಮಾರೋಪ ಸಮಾರಂಭ




ಜೂನ್ 9 ರಂದು ಝಾರ್ಖಂಡ್ ರಾಜ್ಯದ ಜಂಷೆಡ್‌ಪುರದಲ್ಲಿ ಶಿಕ್ಷಕ ಮಹಾಸಂಘದ ಬೆಳ್ಳಿ ಹಬ್ಬದ ಸಮಾರೋಪ ಸಮಾರಂಭ. ವೇದಿಕೆಯಲ್ಲಿ ಶ್ರೀ ಜೆ.ಪಿ. ಸಿಂಘಾಲ್, ಶ್ರೀ ಮಹೇಂದ್ರಕಪೂರ್, ಡಾ. ವಿಮಲ್ ಪ್ರಸಾದ ಅಗರ್‌ಲಾಲ್, ಶ್ರೀ ಕೃ ನರಹರಿ, ಶ್ರೀ ಕೆ. ಬಾಲಕೃಷ್ಣಭಟ್ ಉಪಸ್ಥಿತರಿದ್ದರು.

ಪುಟ 3

## ಬೋಧಕರ ಸಮಸ್ಯೆಗೆ ಸ್ಪಂದಿಸಲು ಕಿಮ್ಮನೆಯವರಿಗೆ ಮನವಿ

A Journal of Karnataka State Secondary Teachers' Association

# ಸಂಪಾದಕೀಯ

ಬೇಸಗೆಯ ಧಗೆ ಕಳೆದು ತಂಪಾದ ಗಾಳಿ ಬೀಸುವ ಕಾಲ. ಈ ತಂಪು ವಾತಾವರಣದಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು ಉತ್ಸಾಹದಿಂದ ಶಾಲೆಗೆ ವಾಪಸಾಗುತ್ತಾರೆ. ಹೊಸ ಶೈಕ್ಷಣಿಕ ವರ್ಷದ ಚಟುವಟಿಕೆಗಳು ಹೊಸ ಉತ್ಸಾಹದಿಂದ ಆರಂಭವಾಗಿದೆ. ಶಾಲೆಯಲ್ಲಿನ ಕಳೆದ ವರ್ಷದ ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶಗಳು ಹೆಚ್ಚು ಸ್ಫೂರ್ತಿಯಿಂದ ಕೆಲಸ ಮಾಡಲು ನಮ್ಮೆಲ್ಲ ಶಿಕ್ಷಕರಿಗೆ ಪ್ರೇರಣೆ ನೀಡುವುದರಲ್ಲಿ ಎರಡು ಮಾತಿಲ್ಲ. ನಮ್ಮ ಹೊಸ ಶೈಕ್ಷಣಿಕ ವರ್ಷ ಪ್ರಾರಂಭವಾಗುವುದರ ಜೊತೆ ಜೊತೆಗೇ ಕರ್ನಾಟಕದಲ್ಲಿ ಹೊಸ ಸರ್ಕಾರ ರಚಿತವಾಗಿ ನೂತನ ವಿದ್ಯಾಮಂತ್ರಿಗಳು ಶಿಕ್ಷಣ ಕ್ಷೇತ್ರದ, ಶಿಕ್ಷಕರ ಎಲ್ಲಾ ಸಮಸ್ಯೆಗಳೂ ಪರಿಹಾರಗೊಂಡು ಶಿಕ್ಷಕರು ಹೆಚ್ಚು ನೆಮ್ಮದಿಯಿಂದ ಬೋಧನಾಕಾರ್ಯದಲ್ಲಿ ತೊಡಗಿಸಿ ಕೊಳ್ಳುವಂತಾಗಲಿ ಎಂದು ಶಿಕ್ಷಕ ಸಮಾಚಾರ ಆಶಿಸುತ್ತದೆ.

"ಜೂನ್ 5 ವಿಶ್ವಪರಿಸರ ದಿನ" ಪರಿಸರದ ಕಾಳಜಿಯ ಕೊರತೆಯಿಂದಾಗಿಯೋ, ಸ್ವಾರ್ಥ ಹೆಚ್ಚಾಗಿಯೋ ಪರಿಸರ ನಾಶದಿಂದಾಗುವ ದುಷ್ಪರಿಣಾಮಗಳನ್ನು ಕಡೆಗಣಿಸಿರುವುದರಿಂದಲೇ ಈಗ ನಾವು ಅನೇಕ ರೀತಿಯ ಸಮಸ್ಯೆಗಳನ್ನು ಎದುರಿಸುವಂತಾಗಿದೆ. ವಿಶ್ವಪರಿಸರದ ದಿನದ ಸಂದರ್ಭದಲ್ಲಿ ಶಿಕ್ಷಕರಾದ ನಾವು ನಮ್ಮ ಮಕ್ಕಳನ್ನು ಜಾಗೃತಗೊಳಿಸೋಣ. ಶಾಲೆಯ ಪರಿಸರ ಸಂಘದಲ್ಲಿ ವೈವಿಧ್ಯಮಯ ಚಟುವಟಿಕೆಗಳನ್ನು ಹಮ್ಮಿಕೊಂಡು ಮಕ್ಕಳಲ್ಲಿ ಪರಿಸರವನ್ನು ಉಳಿಸುವ, ಬೆಳೆಸುವ ಅಗತ್ಯತೆ, ಅನಿವಾರ್ಯತೆ, ಹಾಗೂ ವಿಧಾನಗಳನ್ನು ಮನವರಿಕೆ ಮಾಡಿಕೊಡಬಹುದು. ಪ್ರಾಕೃತಿಕ ಪರಿಸರದಂತೆಯೇ ಸಮಾಜದ ಸಾಂಸ್ಕೃತಿಕ ಪರಿಸರವನ್ನು ಕಾಪಾಡುವುದೂ ಬಹಳ ಮುಖ್ಯ. ಸಮಾಜದಲ್ಲಿ ನಮ್ಮ ಉತ್ತಮ ನಡವಳಿಕೆಯ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಬೆಳೆಸುವಂತೆ ವಿದ್ಯಾರ್ಥಿಗಳಿಗೆ ಶಿಕ್ಷಕರಾದ ನಾವು ಅರಿವು ಮೂಡಿಸಬೇಕು. ಆ ಮೂಲಕ ನೆಮ್ಮದಿಯ ಸಮಾಜವನ್ನು ಕಟ್ಟುವ ಪ್ರಯತ್ನ ಮಾಡೋಣ.

ಸಂಪಾದಕ

# ವಿವೇಕವಾಣಿ




ನೀವು ಹೇಗೆ ಭಾವಿಸುವಿರೋ ಹಾಗೆಯೇ ಆಗುವಿರಿ. ನಿಮ್ಮನ್ನು ನೀವು ದುರ್ಬಲರೆಂದು ಭಾವಿಸಿದರೆ ದುರ್ಬಲರೇ ಆಗುವಿರಿ. ನಿಮ್ಮನ್ನು ನೀವು ಬಲಿಷ್ಠರೆಂದು ಭಾವಿಸಿದರೆ ಬಲಿಷ್ಠರೇ ಆಗುವಿರಿ. ನಿಮ್ಮನ್ನು ನೀವು ಅಪವಿತ್ರರೆಂದು ಭಾವಿಸಿದರೆ ಅಪವಿತ್ರರೇ ಆಗುವಿರಿ. ಇದು ಸತ್ಯ.

# ಪರಿವಿಡಿ


- ಬೋಧಕರ ಸಮಸ್ಯೆಗೆ ಸ್ಪಂದಿಸಲು ಕಿಮ್ಮನೆಯವರಿಗೆ ಮನವಿ — 3
- ಕಾರ್ಯಕರ್ತ ದೇವೋಭವ — 4
- ಬೆಳ್ಳಿ ಹಬ್ಬದ ಸಮಾರೋಪ ಸಮಾರಂಭ — 5
- ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ — 6
- ದೇಶದ ತೊಂದರೆ ಬಗ್ಗೆ ನನಗೇಕೆ ಚಿಂತೆ — 8
- ಅಪರೂಪ–ಅನುಕರಣೀಯ–ವಿದಾಯ — 10

# ಬೋಧಕರ ಸಮಸ್ಯೆಗೆ ಸ್ಪಂದಿಸಲು ಕಿಮ್ಮನೆಯವರಿಗೆ ಮನವಿ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ಪದಾಧಿಕಾರಿಗಳ ತಂಡ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳಾದ ಕಿಮ್ಮನೆ ರತ್ನಾಕರ ಅವರನ್ನು ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು. ರಾಜ್ಯಾಧ್ಯಕ್ಷ ಬಾಲಕೃಷ್ಣ ಭಟ್, ರಾಜ್ಯ ಸಂಘಟನಾ ಕಾರ್ಯದರ್ಶಿ ಅರುಣ್ ಶಹಾಪುರ, ರಾಜ್ಯ ಕಾರ್ಯದರ್ಶಿ ಶಿವಾನಂದ ಸಿಂಧನಕೇರ ಮತ್ತು ಬೆಂಗಳೂರು ವಿಭಾಗದ ಪ್ರಮುಖ ಡಿ. ಎಚ್. ವರದರಾಜು, ಕಾರ್ಯಕಾರಿಣಿ ಸದಸ್ಯ ಚಿದಾನಂದ ಪಾಟೀಲ್, ಶಿಕ್ಷಣ ಮಂತ್ರಿಗಳ ಜೊತೆಯಲ್ಲಿ ಸಮಾಲೋಚಿಸಿ ಶಿಕ್ಷಕರ ಸಮಸ್ಯೆಗಳ ಬಗ್ಗೆ ಮನವಿ ಸಲ್ಲಿಸಿ, ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸಬೇಕೆಂದು ವಿನಂತಿಸಿದರು.

**ಮನವಿಯ ಮುಖ್ಯಾಂಶಗಳು ಈ ಕೆಳಗಿನಂತಿವೆ.**

1. ಪದವಿಪೂರ್ವ ಕಾಲೇಜಿನ ಉಪನ್ಯಾಸಕರಿಗೆ 20 ವರ್ಷದ ಕಾಲಮಿತಿ ಬಡ್ತಿ ನೀಡುವುದು.
2. ದೈಹಿಕ ಶಿಕ್ಷಕರಿಗೆ ವೈದ್ಯನಾಥನ್ ವರದಿ ಪ್ರಕಾರ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಶೀಘ್ರವಾಗಿ ರೂಪಿಸುವುದು.
3. ಖಾಸಗೀ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಜೆ.ಒ.ಸಿ ಉಪನ್ಯಾಸಕರಿಗೆ ಶೀಘ್ರವಾಗಿ ನೇಮಕಾತಿ ಆದೇಶ ನೀಡುವುದು.
4. 1987–95 ರ ತನಕ ಪ್ರಾರಂಭವಾದ ಶಿಕ್ಷಣ ಸಂಸ್ಥೆಗಳಿಗೆ ಹಿಂದಿನ ಸರ್ಕಾರವು ಅನುದಾನ ನೀಡಿದೆ. ಆದರೆ ಕೆಲವು ಶಾಲಾ ಕಾಲೇಜುಗಳು ಅನುದಾನ ಪಡೆಯಲು ಸಲ್ಲಿಸಿದ್ದ ಬೇಡಿಕೆ ಸರ್ಕಾರದ ವಿವಿಧ ಹಂತಗಳಲ್ಲಿ ಬಾಕಿ ಇದ್ದು ಶೀಘ್ರವಾಗಿ ಬಿಡುಗಡೆ ಮಾಡಲು ಕೋರಿದೆ.
5. ಕಾಲ್ಪನಿಕ ಮುಂಬಡ್ತಿ ಪಡೆದು, ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕ ಮತ್ತು ಉಪನ್ಯಾಸಕರ ಮುಂಬಡ್ತಿಗಳನ್ನು ಹಿಂಪಡೆಯದೆ ಅವರಿಗೆ ಶಾಶ್ವತ ಪರಿಹಾರ ನೀಡುವುದು. ಖಾಸಗೀ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ ಕಾಲ್ಪನಿಕ ಮುಂಬಡ್ತಿ ಸಮಸ್ಯೆಯಿಂದಾಗಿ 10, 15 ಮತ್ತು 20 ವರ್ಷಗಳ ಕಾಲಮಿತಿ ಬಡ್ತಿ ಪಡೆಯದೆ ತೊಂದರೆಗೆ ಒಳಗಾಗಿದ್ದು, ಶೀಘ್ರವಾಗಿ ಪರಿಹರಿಸಲು ಕೋರಿದೆ.
6. ಸರ್ಕಾರಿ ಶಾಲಾ ಕಾಲೇಜುಗಳ ಶಿಕ್ಷಕ ಮತ್ತು ಉಪನ್ಯಾಸಕರಿಗೆ ತಮಿಳುನಾಡು ಮಾದರಿಯಲ್ಲಿ ಆರೋಗ್ಯ ಕಾರ್ಡ್ ನೀಡುವುದು.

ಮೇಲಿನ ಸಮಸ್ಯೆಗಳನ್ನು ತಾವು ಕೂಲಂಕಶವಾಗಿ ಪರಿಶೀಲಿಸಿ ಶೀಘ್ರವಾಗಿ ಬಗೆಹರಿಸಬೇಕೆಂದು, ಮತ್ತು ಈ ಕ್ಷೇತ್ರದಲ್ಲಿ ಕೆಲಸಮಾಡುತ್ತಾ ಬಂದಿರುವ ನಮ್ಮ ಸಂಘಟನೆಯ ಸಹಕಾರ ಸದಾ ನಿಮ್ಮೊಂದಿಗೆ ಇರುತ್ತದೆ. ಹಾಗೆಯೇ, ಸಲಹೆಗಳಿಗೆ ನಮ್ಮ ಸಂಘಟನೆಯನ್ನು ಪರಿಗಣಿಸಬೇಕೆಂದು ಕೋರುತ್ತೇವೆ.

●

**ನಮ್ಮ ಸುತ್ತಮುತ್ತ ಮಿಲಿಯಗಟ್ಟಲೆ ರೋಗಾಣುಗಳು ಹರಡಿಕೊಂಡಿದ್ದರೂ ನಮ್ಮ ಶರೀರವು ದುರ್ಬಲವಾಗಿ ಅವುಗಳ ಆಕ್ರಮಣಕ್ಕೆ ಎಡೆಮಾಡಿಕೊಡದಿದ್ದರೆ ಅವು ನಮ್ಮನ್ನು ಏನೂ ಮಾಡಲಾರವು ! ಹಾಗೆಯೇ, ದುಃಖ ಸಂಕಟಗಳೆಂಬ ರೋಗಾಣುಗಳು ಅಸಂಖ್ಯಾತವಾಗಿ ನಮ್ಮ ಸುತ್ತಮುತ್ತ ತುಂಬಿಕೊಂಡಿರಬಹುದು. ಆದರೇನಂತೆ? ನಮ್ಮ ಮನಸ್ಸೊಂದು ಸಶಕ್ತವಾಗಿದ್ದು ಬಿಟ್ಟರೆ ಆ ದುಃಖ ಸಂಕಟಗಳು ನಮ್ಮನ್ನು ಕಾಡುವ ಮಾತಂತಿರಲಿ. ನಮ್ಮ ಹತ್ತಿರವೇ ಸುಳಿಯಲಾರವು. ಇದೊಂದು ದೊಡ್ಡ ಸತ್ಯ, ಏನೆಂದರೆ,**

**ಶಕ್ತಿಯೇ ಜೀವನ, ದೌರ್ಬಲ್ಯವೇ ಮರಣ. ಶಕ್ತಿಯೇ ಆನಂದ, ಶಕ್ತಿಯೇ ಅಮೃತ, ಅದೊಂದೇ ಶಾಶ್ವತ. ದೌರ್ಬಲ್ಯದಿಂದ ನಿರಂತರ ಆಯಾಸ ಮತ್ತು ದುಃಖ; ದೌರ್ಬಲ್ಯವು ಮರಣವೇ!**

**– ಸ್ವಾಮಿ ವಿವೇಕಾನಂದ**

ಅಧ್ಯಕ್ಷರ ಫ್ಯಾಕ್ಸ್‌ನಿಂದ.........

**ಕೆ. ಬಾಲಕೃಷ್ಣ ಭಟ್,** Ex. MLC, ಅಧ್ಯಕ್ಷರು, ಶಿಕ್ಷಕ ಸಂಘ

# ಕಾರ್ಯಕರ್ತ ದೇವೋಭವ

ಇದೇನಿದು? ಹೊಸದೊಂದು ಘೋಷವಾಕ್ಯ ಎಂದುಕೊಂಡೀರಿ! ಹೌದು. ಒಂದು ದೃಷ್ಟಿಯಿಂದ ಇದೊಂದು ಹೊಸ ಘೋಷಣೆ ಅಥವಾ ಘೋಷ ವಾಕ್ಯ ಎನ್ನಲೂ ಅಡ್ಡಿಯಿಲ್ಲ. ಏಕೆಂದರೆ ಉಪನಿಷತ್ ಕಾಲದಿಂದಲೂ ಭಾರತದಲ್ಲಿ ಪ್ರಚಲಿತವಿದ್ದ ಮಾತೃದೇವೋ ಭವ, ಪಿತೃದೇವೋಭವ, ಆಚಾರ್ಯದೇವೋಭವ ಮತ್ತು ಅತಿಥಿದೇವೋಭವ ಎಂಬ ಉಕ್ತಿಗಳಿಗೆ ಈಗ್ಗೆ 120 ವರ್ಷಗಳ ಕೆಳಗೆ ಸ್ವಾಮಿ ವಿವೇಕಾನಂದರು ದೀನ ದೇವೋಭವ ಮತ್ತು ದರಿದ್ರದೇವೋಭವ ಎಂಬ ಸಾಲುಗಳನ್ನು ಉದ್ದೇಶಪಟ್ಟೇ ಸೇರಿಸಿರುವಂತಹುದು. ತಾಯಿಗಿಂತ ಮಿಗಿಲಾದ ದೇವರಿಲ್ಲ ಎಂಬ ಮಾತು ಸತ್ಯ. ಆದರೆ ತಾಯಿಯ ಸಮಾನರು ಯಾರ್‍ಯಾರು ಎಂಬುದಕ್ಕೆ ನಮ್ಮ ಪೂರ್ವಜರು ತಾಯಿ ಮತ್ತು ತಾಯ್ನಾಡು ಸಮಾನ ಪೂಜ್ಯ ಭಾವಕ್ಕೆ ಅರ್ಹ ಎಂದಿದ್ದಾರೆ. ಈ ಮಾತು ಸತ್ಯಸ್ಯಸತ್ಯ. ನಮ್ಮ ಸಂಸ್ಕೃತಿಯಲ್ಲಿ ತಾಯಿಗೆ ಸಮಾನವಾಗಿ ಭೂಮಾತೆ, ಗಂಗಾಮಾತೆ ಹಾಗೂ ಗೋಮಾತೆಯರನ್ನೂ ನೆನೆದಿದ್ದಾರೆ. ಭೂಮಾತೆಯ ಬಗ್ಗೆ ಹೇಳುವುದಾದರೆ ರಾಮಾಯಣದಲ್ಲಿ ಶ್ರೀರಾಮನು **'ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪೀ ಗರೀಯಸಿ'** ಎನ್ನುತ್ತಾ, ತಾಯಿ ಮತ್ತು ತಾಯ್ನಾಡು ಸ್ವರ್ಗಕ್ಕೂ ಮಿಗಿಲು ಎಂದಿದ್ದಾನೆ. ಗಂಗೆ, ಸಕಲ ಜೀವಾಧಾರವಾದ ನೀರಿನ ಪ್ರತಿರೂಪ. ನೀರಿಲ್ಲದ ಜಗತ್ತನ್ನು ಊಹಿಸಲೂ ಅಸಾಧ್ಯ. ಇಂಥ ಗಂಗೆಯನ್ನು ತಾಯಿ ಎಂದು ಸಂಬೋಧಿಸಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಮಗುವಿಗೆ, ತಾಯಿಗೆ ಪರ್ಯಾಯವೆಂದರೆ ಇಂದಿಗೂ ಗೋವೇ. ಗೋವಿನ ಮೇಲಿರುವ ಪದ್ಯದಲ್ಲಿ ಕವಿ ಹಾಲು, ಮೊಸರು, ಬೆಣ್ಣೆಗಳಲ್ಲದೆ, "ಇಟ್ಟರೆ ಸಗಣಿಯಾದೆ, ತಟ್ಟಿದರೆ ಬೆರಣಿಯಾದೆ, ಸುಟ್ಟರೆ ನೊಸಲಿಗೆ ವಿಭೂತಿಯಾದೆ, ಹಾಯಿಹರಿಗೋಲಾದೆ, ರಾಯರ ಕಾಲಿಗೆ ಚಪ್ಪಲಿಯಾದೆ ನೀನಾರಿಗಾದೆಯೋ ಎಲೆ ಮಾನವ?" ಎಂದು ಗೋಮಾತೆಯನ್ನು ಹಾಡಿ ಹೊಗಳಿದ್ದಾರೆ.

ಇನ್ನು ಪಿತೃ ಸಮಾನರು ಯಾರ್‍ಯಾರು ಎಂಬುದನ್ನು ಭಾರತೀಯ ವಾಙ್ಮಯ ತಿಳಿಸಿಕೊಟ್ಟಿದೆ.

'ಪಿತೃದೇವೋಭವ' ತಂದೆಯನ್ನು ದೇವರೆಂದೇ ಕಾಣು ಅನ್ನುತ್ತದೆ ಈ ವಾಕ್ಯ. **"ಅನ್ನದಾತಾ, ಭಯತ್ರಾತಾ, ಯಶ್ಚಕನ್ಯಾಂಪ್ರಯಚ್ಛತಿ ಜನಿತಾ ಚೋಪನೇತಾ ಚಪಂಚೈತೇಪಿತರಃಸ್ಮೃತಾ:"** ಎಂಬ ಶ್ಲೋಕವು ಪಿತೃವಿಗೆ ಸಮಾನರಾದವರು ಇನ್ನು ಯಾರ್‍ಯಾರು? ಎಂಬುದನ್ನೂ ಶ್ರುತಪಡಿಸಿದೆ. ಊಟವಿಕ್ಕಿದವನು, ಆಪತ್ತಿನಿಂದ ರಕ್ಷಿಸಿದವನು, ಕನ್ಯೆಯನ್ನು ವಿವಾಹ ಮಾಡಿಕೊಟ್ಟವನು, ಜನ್ಮ ನೀಡಿದವನು ಮತ್ತು ಉಪನಯನ ಮಾಡಿಸಿದವನು ಹೀಗೆ ಈ ಐವರು ಪಿತೃ ಸ್ಥಾನಕ್ಕೆ ಅರ್ಹತೆಯುಳ್ಳವರು ಎಂದಾಗುತ್ತದೆ.

ಬದುಕನ್ನು ಸಾಧ್ಯವಾಗಿಸಲು ಅನ್ನ ಬೇಕೇಬೇಕು. ಅದನ್ನು ನೀಡುವುದು ಅಂದರೆ ತಾನಾಗಿ ತನ್ನ ಹೊಟ್ಟೆ ಹೊರೆಯಲು ಶಕ್ತನಿಲ್ಲದಿದ್ದರೆ ಅಥವಾ ಶಕ್ತನಾಗುವವರೆಗೆ ಅನ್ನ ನೀಡುವವನನ್ನು ತಂದೆಯೆಂದೇ ಕಾಣಬೇಕಂತೆ. ಅಂತೆಯೇ ಭಯದಿಂದ ರಕ್ಷಿಸಿದವನು – ಪ್ರಾಣ ಭಯದಿಂದ ಯಾರು ಪಾರುಮಾಡುತ್ತಾನೋ ಅವನು ಎಂದು ಇದರ ಅರ್ಥ. ಪ್ರಾಣ ಭಯದಿಂದ ರಕ್ಷಣೆ ದೊರೆಯದಿದ್ದರೆ ಮರಣ ಸಂಭವನೀಯ ತಾನೇ?. ಆದ್ದರಿಂದ ಅವನಿಗೂ ಜನ್ಮ ನೀಡಿದ ತಂದೆ ಸ್ಥಾನ. ತನ್ನ ಪೀಳಿಗೆಯ ಮುಂದುವರಿಕೆಗಾಗಿ ಸಂತಾನ ಪಡೆಯಲು ಕನ್ಯೆಯನ್ನು ವಿವಾಹದಲ್ಲಿ ಪಡೆಯುವುದು. ಅವಶ್ಯ ತಾನೇ? ಹಾಗೆ ಅದನ್ನು ನೀಡುವವನೂ ಅಂದರೆ ಕನ್ಯಾದಾನಿ ತನಗೆ ಪಿತೃಸಮಾನ ಎಂದಂತಾಯಿತು. ಜನ್ಮಕೊಟ್ಟ ತಂದೆಯ ಜತೆಗೆ ಎರಡನೇ ಜನ್ಮ (ದ್ವಿಜತ್ವ) ನೀಡಿದವನು ಅಥವಾ ಉಪನಯನ ಸಂಸ್ಕಾರ ನೀಡಿದವನೂ ತಂದೆಗೆ ಸಮಾನವಂತೆ, ಹೀಗೆ ಜನ್ಮನೀಡದವನು ತಂದೆಯಾಗಿದ್ದರೂ ಮೇಲೆ ಹೇಳಿದ ಇತರ ನಾಲ್ವರೂ ಪಿತೃ ಸಮಾನ ಎಂದಂತಾಯಿತು. ತಾಯಿ, ತಂದೆ, ತಂದೆಗೆ ಸಮಾನರು, ಆಚಾರ್ಯರು ಮತ್ತು ಅತಿಥಿಯನ್ನು ದೇವರಂತೆ ಕಾಣಬೇಕು ಎಂಬುದು ಸಹಸ್ರಾರು ವರ್ಷಗಳಿಂದ ನಾವು ನಂಬಿಕೊಂಡು ಬಂದ, ಆಚರಿಸಿಕೊಂಡು ಬಂದ ಸಂಸ್ಕಾರದ ಭಾಗ.

ಭಾರತದ ಉದ್ದಗಲಕ್ಕೂ ಅಲ್ಲಿನ ನಿಜಸ್ಥಿತಿಯನ್ನು

(9ನೇ ಪುಟಕ್ಕೆ.....)

# ಬೆಳ್ಳಿ ಹಬ್ಬದ ಸಮಾರೋಪ ಸಮಾರಂಭ

2012 ರ ಜೂನ್ ನಲ್ಲಿ ರಾಷ್ಟ್ರೀಯ ಶೈಕ್ಷಿಕ ಮಹಾಸಂಘ (ಎ.ಬಿ.ಆರ್.ಎಸ್.ಎಂ) ದ ಬೆಳ್ಳಿ ಹಬ್ಬದ ಉದ್ಘಾಟನಾ ಸಮಾರಂಭವು ದೆಹಲಿಯಲ್ಲಿ ನಡೆಯಿತು. ಶಿಕ್ಷಕ ಮಹಾಸಂಘವು 2012–13 ರನ್ನು ರಜತವರ್ಷವೆಂದು ಇಡೀ ವರ್ಷ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳನ್ನು ಆಯೋಜಿಸಿತ್ತು. ಕಳೆದ ಅಕ್ಟೋಬರ್ 26. 27,28 ರಂದು ಬೆಂಗಳೂರು ಬಳಿಯ ಚನ್ನೇನಹಳ್ಳಿಯಲ್ಲಿರುವ ಜನಸೇವಾ ನಿಲಯ ಪ್ರೌಢಶಾಲೆಯಲ್ಲಿ ದೇಶಾದ್ಯಂತದಿಂದ ಬಂದಿದ್ದ 2000 ಜನ ಶಿಕ್ಷಕರ ರಾಷ್ಟ್ರೀಯ ಅಧಿವೇಶನವು ನಡೆಯಿತು.

ಇದೇ ಜೂನ್ 9 ನೇ ದಿನಾಂಕದಂದು ಝಾರ್ಖಂಡ್ ರಾಜ್ಯದ ಜಂಷೆಡ್‌ಪುರದಲ್ಲಿ ಬೆಳ್ಳಿ ಹಬ್ಬದ ಸಮಾರೋಪ ಸಮಾರಂಭವನ್ನು ಆಯೋಜಿಸಲಾಗಿತ್ತು. ಭಾರತದ 22 ರಾಜ್ಯಗಳಿಂದ ಎ.ಬಿ.ಆರ್.ಎಸ್.ಎಂ. ನ ಎಲ್ಲ ಪ್ರಮುಖ ಕಾರ್ಯಕರ್ತರೂ ಭಾಗವಹಿಸಿದ್ದ ಈ ಸಮಾರಂಭವು, ಟಾಟಾನಗರದಲ್ಲಿರುವ ಸ್ವಾಮಿ ವೇದಾನಂದ ಆಶ್ರಮದಲ್ಲಿ ನಡೆಯಿತು.

ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಕಾಶ್ಮೀರಿ ಪಂಡಿತರಿಗೆ ನ್ಯಾಯ ದೊರಕಿಸಿ ಕೊಡಲು ಹೋರಾಡುತ್ತಿರುವ ಹಿರಿಯ ಸಾಮಾಜಿಕ ಕಾರ್ಯಕರ್ತರಾದ ಶ್ರೀ ಅರುಣ್ ಕುಮಾರ್‌ರವರು ಆಗಮಿಸಿದ್ದರು. ಎ.ಬಿ.ಆರ್.ಎಸ್.ಎಂ. ರಾಷ್ಟ್ರೀಯ ಅಧ್ಯಕ್ಷರಾದ ಡಾ. ವಿಮಲ್ ಪ್ರಸಾದ ಅಗರ್‌ಲಾಲ್‌ರವರು ಅಧ್ಯಕ್ಷತೆ ವಹಿಸಿದ್ದರು. ಮಹಾ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಡಾ. ಜೆ.ಪಿ. ಸಿಂಘಲ್ ರವರು ಇಡೀ ವರ್ಷ ಸಂಘದ ಆಶ್ರಯದಲ್ಲಿ ನಡೆದ ವಿವಿಧ ಕಾರ್ಯಯೋಜನೆಯ ವರದಿಯನ್ನು ನೀಡುತ್ತಾ, ವಿವೇಕಾನಂದರ 150 ನೇ ಜನ್ಮದಿನೋತ್ಸವವನ್ನು ಆಚರಿಸುತ್ತಿರುವ ಈ ವರ್ಷದಲ್ಲಿ ಭಾರತದ ಭಾವೀ ಪೀಳಿಗೆಗೆ ಸ್ವಾಮೀಜಿಯವರ ಜೀವನ ಮತ್ತು ಕಾರ್ಯವನ್ನು ಪರಿಚಯಿಸುವ 'ಸಮರ್ಥ ಭಾರತ' ಪರೀಕ್ಷೆಯಲ್ಲಿ ಇಡೀ ದೇಶದ 5 ರಿಂದ 12 ನೇ ತರಗತಿಯ 10 ಲಕ್ಷ ವಿದ್ಯಾರ್ಥಿಗಳು ಭಾಗವಹಿಸಿದ್ದನ್ನು ಉಲ್ಲೇಖಿಸಿದ್ದಾಗ ಸಭಿಕರು ಚಪ್ಪಾಳೆ ತಟ್ಟಿ ಹರ್ಷೋದ್ಗಾರ ಮಾಡಿದರು.

ಶ್ರೀ ಅರುಣ್ ಕುಮಾರ್‌ರವರು ಸಮಾರೋಪ ಭಾಷಣ ಮಾಡುತ್ತಾ ಎ.ಬಿ.ಆರ್.ಎಸ್.ಎಂ. ಗೆ 25 ವರ್ಷಗಳ ಜೀವಿತಾವಧಿ ತುಂಬ ಚಿಕ್ಕದಾದರೂ ಅದು ಮಾಡಿರುವ ಕೆಲಸ ಶ್ಲಾಘನೀಯ. ಆದರೆ ಯಾವುದೇ ಸಂಘಟನೆಯು ತನ್ನ ಸಾಧನೆಯ ಬಗ್ಗೆ ಸಿಂಹಾವಲೋಕನ ಮಾಡುವಾಗ ಅದು ಸಫಲ ಜೀವನವನ್ನು ಉತ್ಕರ್ಷಗೊಳಿಸಲು ಶ್ರಮಿಸುವುದು ಅತ್ಯಗತ್ಯ. ಅಂಥ ಯಶಸ್ವೀ ಶಿಕ್ಷಕ ಸಂಘಟನೆ ಕಟ್ಟಲು ಎಲ್ಲರೂ ಶ್ರಮಿಸಬೇಕೆಂದು ಕರೆಕೊಟ್ಟರು.

ವೇದಿಕೆಯಲ್ಲಿ ಶಿಕ್ಷಕ ಮಹಾಸಂಘದ ಪೋಷಕರಾದ ಶ್ರೀ ಕೃ ನರಹರಿ, ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಮಹೇಂದ್ರಕಪೂರ್‌ರವರು ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಮಹಾಸಂಘದ ಸೆಕೆಂಡರಿ ವಿಭಾಗದ ಸಹ ಕಾರ್ಯದರ್ಶಿ ಗಳಾದ ಜಂಷೆಡ್‌ಪುರ್ ನಿವಾಸಿ ಡಾ. ಅಶೋಕ್ ಕುಮಾರ್ ಸಿಂಗ್‌ರವರು ಸಭೆಗೆ ಎಲ್ಲರನ್ನೂ ಸ್ವಾಗತಿಸಿ ಅತಿಥಿಗಳನ್ನು ಪರಿಚಯಿಸಿದರು. ಕೊನೆಯಲ್ಲಿ ಮಹಾಸಂಘದ ಸಹ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಕೆ. ಬಾಲಕೃಷ್ಣಭಟ್ ರವರು ವಂದಿಸಿದರು. ವಂದೇ ಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು. ●

---

**ನೀನಾಗಿ ತಪ್ಪು ಮಾಡಬೇಡ, ಹಿಂಸೆ ಮಾಡಲೂ ಬೇಡ. ಇತರರನ್ನು ತುಳಿಯಲೂ ಬೇಡ. ಬದಲಾಗಿ, ನಿನ್ನಿಂದಾದಷ್ಟು ಒಳ್ಳೆಯದನ್ನೇ ಮಾಡುತ್ತಾ ಬಾ. ಆದರೆ, ಇತರರು ಮಾಡುವ ಅನ್ಯಾಯಗಳಿಗೆ ಮಾತ್ರ ಸುಮ್ಮನೆ ಕೈಕಟ್ಟಿಕೊಂಡು ತಲೆಬಾಗಬೇಡ. ಅವರು ಗೈದ ಅನ್ಯಾಯಕ್ಕೆ ತಕ್ಕ ಶಾಸ್ತಿ ಮಾಡಲೇಬೇಕು. ಹೀಗೆ ಮಾಡದಿದ್ದರೆ, ನಿನ್ನನ್ನು ನೀನು ಮನುಷ್ಯನೆಂದು ಯಾವ ಬಾಯಿಂದ ಹೇಳಿಕೊಳ್ಳುವೆ?**

**– ಸ್ವಾಮಿ ವಿವೇಕಾನಂದ**



# ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನ (CCE)

■ ವಿ. ರಾಜ
ಕನ್ನಡ ಭಾಷಾ ಸಂಪನ್ಮೂಲ ವ್ಯಕ್ತಿ

'ಕಲಿಕೆ' ಎಂಬುದು ನಿರಂತರವಾದುದು. ಶ್ರೀರಾಮಕೃಷ್ಣ ಪರಮಹಂಸರು 'ನಾನು ಬದುಕಿರುವವರೆಗೂ ಕಲಿಯುತ್ತೇನೆ' ಎಂದು ಹೇಳುತ್ತಿದ್ದರು. ಅಂದ ಮೇಲೆ 'ನಾನು ಎಲ್ಲವನ್ನೂ ಕಲಿತೆ' ಎಂದು ಯಾರಾದರೂ ಹೇಳಿದರೆ ಅದು ಅವರ ಭ್ರಮೆ ಎನಿಸುತ್ತದೆ. ಕಲಿಕೆಯನ್ನು ನಾವು ಹೇಗೆ ಒರೆ ಹಚ್ಚುತ್ತಿದ್ದೇವೆ? ಆ ವಿಧಾನ ಸರಿಯೇ ? ಮಕ್ಕಳನ್ನು ಪರೀಕ್ಷೆಗಳಲ್ಲಿ ಪಾಸು ಮಾಡಿಸುವ ಸಲುವಾಗಿಯೇ ಕಲಿಸುತ್ತಿದ್ದೇವೆಯೇ? ಎಂಬ ಪ್ರಶ್ನೆಗಳು ನಮ್ಮನ್ನು ಕಾಡುತ್ತಿರುತ್ತವೆ.

"ನಮ್ಮನ್ನು ಪುರುಷಸಿಂಹರನ್ನಾಗಿಸುವುದೇ ನಿಜವಾದ ಶಿಕ್ಷಣ" ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ನಾವು ನೀಡುವ ಶಿಕ್ಷಣದಿಂದ ವಿದ್ಯಾರ್ಥಿಯ ಸರ್ವಾಂಗೀಣ ಉನ್ನತಿಯಾಗಬೇಕು. ಅವನಲ್ಲಿರುವ ಎಲ್ಲಾ ಪ್ರತಿಭೆಗಳಿಗೂ ಪ್ರೋತ್ಸಾಹ ಸಿಗುವಂತಿರಬೇಕು. ಕೇವಲ ಪರೀಕ್ಷೆ ಮಾಡಿ, ಅಂಕಗಳನ್ನು ನೀಡಿ ನಮ್ಮ ಕರ್ತವ್ಯದಿಂದ ಜಾರಿಕೊಳ್ಳುವುದು ಸರಿಯಲ್ಲ. ವಿದ್ಯಾರ್ಥಿಗಳು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಸಲುವಾಗಿ ವಿವಿಧ ಆಯಾಮಗಳಲ್ಲಿ ಅವರನ್ನು ಅರ್ಥ ಮಾಡಿಕೊಂಡು ಹಿಮ್ಮಾಹಿತಿ ನೀಡಬೇಕಾಗಿದೆ. ಈ ಕಾರ್ಯಕ್ಕೆ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನವು ನಮಗೆ ಮಾದರಿಯಾಗಿದೆ.

ಮೌಲ್ಯಮಾಪನದಲ್ಲಿ ನಿರಂತರತೆ ಮತ್ತು ವ್ಯಾಪಕತೆಯನ್ನು ತರುವುದು, ಕಲಿಕಾ ಪ್ರಕ್ರಿಯೆಯಲ್ಲಿ ಮೌಲ್ಯಮಾಪನವನ್ನು ಅಂತರ್ಗತವಾಗಿಸುವುದರ ಮಹತ್ವವನ್ನು ತಿಳಿಯುವುದು, ಮೌಲ್ಯಮಾಪನವು ಸ್ವಾವಲೋಕನದ ಸಾಧನವನ್ನಾಗಿಸುವುದು, ಅದರ ಮೂಲಕ ಕಲಿಕೆಯನ್ನು ಪ್ರಗತಿಶೀಲವನ್ನಾಗಿಸುವುದು, ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಅಗತ್ಯತೆಯನ್ನು ಅರಿಯುವುದು ಈ ಲೇಖನದ ಉದ್ದೇಶವಾಗಿದೆ.

ಕಲಿಸುವ ವಿಧಾನವು ಶಿಕ್ಷಕ ಕೇಂದ್ರಿತ ಶಿಕ್ಷಣದಿಂದ ವಿದ್ಯಾರ್ಥಿ ಕೇಂದ್ರಿತ ಶಿಕ್ಷಣದತ್ತ ಸಾಗುತ್ತಿದೆ. ಆದರೆ ಮೌಲ್ಯಮಾಪನ ಪ್ರಕ್ರಿಯೆಯು ಇನ್ನೂ ಹಳೆಯ ಪದ್ಧತಿಯಾಗಿಯೇ ಉಳಿದುಕೊಂಡಿದೆ. ವಿದ್ಯಾರ್ಥಿ ಸಮೂಹದಲ್ಲಿ ವಿಭಿನ್ನ ಆಸಕ್ತಿ, ಅಭಿರುಚಿ, ಮನೋಧರ್ಮಗಳು ವ್ಯಕ್ತವಾಗುತ್ತಿದ್ದು ಪ್ರತಿಯೊಂದು ಮಗುವೂ ವಿಶಿಷ್ಟ ಎನಿಸುತ್ತಿದೆ. ಎಲ್ಲ ವಿದ್ಯಾರ್ಥಿಗಳನ್ನೂ ಒಂದೇ ಅಳತೆಗೋಲಿನಿಂದ ಅಳೆದು ಪ್ರಗತಿ ಇಂತಿಷ್ಟೇ ಎಂದು ನಿರ್ಧರಿಸುವುದು ಸೂಕ್ತವಾದ ಕ್ರಮವಲ್ಲ. ವಿದ್ಯಾರ್ಥಿಗಳ ವಿಭಿನ್ನ ಆಸಕ್ತಿ ಮತ್ತು ಕಲಿಕೆಯ ಪ್ರವೃತ್ತಿಗಳನ್ನು ಮೌಲ್ಯಮಾಪನಕ್ಕೆ ಒಳಪಡಿಸಬೇಕಾಗಿದೆ. ಪಠ್ಯ, ಸಹಪಠ್ಯ ಮತ್ತು ವಿದ್ಯಾರ್ಥಿಯ ಸಮಗ್ರ ವರ್ತನೆಗಳನ್ನು ಗುರುತಿಸಬೇಕಾಗಿದೆ. ವಿದ್ಯಾರ್ಥಿಯ ಸರ್ವಾಂಗೀಣ ಬೆಳವಣಿಗೆಯನ್ನು ಅರಿಯಲು ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವು ಸಹಕಾರಿಯಾಗಿದೆ.

1986 ರ ರಾಷ್ಟ್ರೀಯ ಶಿಕ್ಷಣ ನೀತಿಯು ಶಾಲಾ ಮೌಲ್ಯಮಾಪನವನ್ನು ಬಲಗೊಳಿಸುವುದಕ್ಕಾಗಿ 'ನಿರಂತರ' ಮತ್ತು 'ವ್ಯಾಪಕ' ಎಂಬ ಎರಡು ಪದಗಳನ್ನು ಪರಿಚಯಿಸಿದೆ. ಎನ್‌ಸಿಎಫ್ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು – 2005 ಮತ್ತು ಆರ್‌ಟಿಇ – 2007 ರಲ್ಲೂ ಇದಕ್ಕೆ ವಿಶೇಷ ಪ್ರಾಮುಖ್ಯತೆಯನ್ನು ನೀಡಿದೆ. ವಿದ್ಯಾರ್ಥಿಯ ಪಠ್ಯ ಹಾಗೂ ಸಹಪಠ್ಯ ಚಟುವಟಿಕೆಗಳಲ್ಲಿನ ಸಾಧನೆ, ಶಾಲಾ ಸನ್ನಿವೇಶ, ಸಮಾರಂಭಗಳಲ್ಲಿ ವಿದ್ಯಾರ್ಥಿಯ ವಿವಿಧ ಪಾತ್ರ ನಿರ್ವಹಣೆ, ಪಾಲ್ಗೊಳ್ಳುವಿಕೆ ಮತ್ತು ಪ್ರಗತಿಯನ್ನು ವಿವಿಧ ತಂತ್ರಗಳ ಮೂಲಕ ಸೂಕ್ಷ್ಮವಾಗಿ ಅವಲೋಕಿಸಿ ಸಮಗ್ರವಾಗಿ ದಾಖಲಿಸಿಕೊಂಡು ವಿಶ್ಲೇಷಿಸಿ, ಪಡೆದ ಒಳನೋಟಗಳಿಂದ ಮಗುವಿನ ಸರ್ವಾಂಗೀಣ ಅಭಿವೃದ್ಧಿಯನ್ನು ಅನುಕೂಲಿಸುವ ಪ್ರಕ್ರಿಯೆಗೆ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಎನ್ನಬಹುದಾಗಿದೆ.

**ನಿರಂತರ ಮೌಲ್ಯಮಾಪನ :** ವಿದ್ಯಾರ್ಥಿಗಳು ಶಾಲೆಯಲ್ಲಿ ನಿರ್ದೇಶನಾತ್ಮಕವಾಗಿ ತೊಡಗಿಸಿಕೊಳ್ಳುವ, ವಿವಿಧ ಚಟುವಟಿಕೆಗಳಲ್ಲಿ, ವಿದ್ಯಾರ್ಥಿಗಳು ವರ್ತನೆಗಳನ್ನು ಅವಲೋಕಿಸುವ ಹಾಗೂ ಮಗುವಿನ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಗಮನಿಸುವ ಪ್ರಕ್ರಿಯೆಯನ್ನು ನಿರಂತರ ಮೌಲ್ಯಮಾಪನ ಎನ್ನುತ್ತಾರೆ.

**ವ್ಯಾಪಕ ಮೌಲ್ಯಮಾಪನ :** ನಿರ್ದಿಷ್ಟವಾದ ಪಠ್ಯ, ಸಹಪಠ್ಯ ಹಾಗೂ ಮಗುವಿನ ಎಲ್ಲಾ ವರ್ತನೆಗಳನ್ನು ಅವಲೋಕಿಸುವುದನ್ನು ವ್ಯಾಪಕ ಮೌಲ್ಯಮಾಪನ ಎನ್ನುತ್ತಾರೆ.

**ಮಾಪನ :** ನಿರ್ದಿಷ್ಟ ಕಲಿಕೆಯ ಮಟ್ಟವನ್ನು ಪರಿಮಾಣಾತ್ಮಕವಾಗಿ ಗುರುತಿಸುವುದು ಉದಾಹರಣೆಗೆ ಸಾಮರ್ಥ್ಯ ಗಳಿಕೆಯ ಮಟ್ಟವನ್ನು ಅವಲೋಕಿಸಿ ಅಂಕ ಅಥವಾ ಗ್ರೇಡ್‌ಗಳನ್ನು ನೀಡುವುದು.

**ಮೌಲ್ಯಮಾಪನ :** ಲಭ್ಯವಿರುವ ಎಲ್ಲ ದಾಖಲೆಗಳ

(7ನೇ ಪುಟಕ್ಕೆ.....)


6ನೇ ಪುಟದಿಂದ.....

**ಮೌಲ್ಯಮಾಪನ**

ಆಧಾರದಲ್ಲಿ ಒಂದು ಪ್ರಕ್ರಿಯೆ ಅಥವಾ ಉತ್ಪನ್ನದ ಯೋಗ್ಯತೆಯನ್ನು ನಿರ್ಣಯಿಸುವುದು. ಮತ್ತು ಅರ್ಹತೆ ಯನ್ನು ನಿರ್ಧರಿಸುವುದನ್ನು ಮೌಲ್ಯಮಾಪನ ಎನ್ನುತ್ತೇವೆ.

**ಮೌಲ್ಯಾಂಕನ :** ನಿರ್ದಿಷ್ಟ ಚಟುವಟಿಕೆಗಳಿಗೆ ಸಂಬಂಧಿಸಿ ದಂತೆ ನಿರ್ವಹಣೆಯ ಅಳೆಯುವಿಕೆ, ತೊದಲುವಿಕೆ ಅಥವಾ ನಿರ್ಧಾರಣೆ ಮಾಡುವುದು. ಕಲಿಕೆಯ ಸಾಮರ್ಥ್ಯಗಳ ಗಳಿಕೆಯು ಮಟ್ಟವನ್ನು ಕುರಿತಂತೆ ಮೌಲ್ಯಾಂಕನ ಮಾಡಬಹುದು. ನಿರ್ದಿಷ್ಟ ಕಲಿಕೆಯ ಕುರಿತಂತೆ ಮಾಹಿತಿ ಸಂಗ್ರಹಿಸಿ, ಅರ್ಥೈಸಿ, ವಿಶ್ಲೇಷಿಸಿ, ಕಲಿಕೆಯ ಮಟ್ಟವನ್ನು ನಿಗದಿತ ಮಾನದಂಡಗಳಿಗೆ ಅನುಗುಣವಾಗಿ ನಿರ್ಧರಿಸು ವುದನ್ನು ಮೌಲ್ಯಾಂಕನ ಎನ್ನುತ್ತೇವೆ.

ಈ ಕೆಳಗಿನ ರೇಖಾಚಿತ್ರದಿಂದ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನಗಳ ಅಂತರ್ ಸಂಬಂಧವನ್ನು ತಿಳಿಯೋಣ.




**ನಿರಂತರ ಮೌಲ್ಯಮಾಪನ :** ನಿರಂತರ ಮೌಲ್ಯಮಾಪನ ದಿಂದ ವಿದ್ಯಾರ್ಥಿಯ ದೈಹಿಕ, ಬೌದ್ಧಿಕ, ಮಾನಸಿಕ, ಸಾಮಾಜಿಕ ಬೆಳವಣಿಗೆಗಳನ್ನು ಅವಲೋಕಿಸಿ, ಪ್ರಗತಿಯ ನಿರಂತರತೆಯಲ್ಲಿ ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ.

**ವ್ಯಾಪಕ ಮೌಲ್ಯಮಾಪನ :** ವ್ಯಾಪಕ ಮೌಲ್ಯಮಾಪನದಿಂದ ಪಠ್ಯ, ಸಹಪಠ್ಯ ಸಂಯೋಜಿತ ಹಾಗೂ ಮಗುವಿನ ಸಹಜ ವರ್ತನೆಗಳನ್ನು ಗಮನಿಸಿ ಅವುಗಳನ್ನು ಅಭಿವೃದ್ಧಿ ಪಡಿಸುವುದು.

ಒಟ್ಟಾರೆಯಾಗಿ ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನದಿಂದ ಮಗುವಿನ ಸರ್ವಾಂಗೀಣ ಬೆಳವಣಿಗೆಯನ್ನು ಅನುಕೂಲಿಸಲು ಸಾಧ್ಯವಾಗುತ್ತದೆ.

ನಿರಂತರ ಹಾಗೂ ವ್ಯಾಪಕ ಮೌಲ್ಯಮಾಪನದಲ್ಲಿ ಎರಡು ವಿಧಗಳಿವೆ.

1. ರೂಪಣಾತ್ಮಕ (Formative) ಮೌಲ್ಯಮಾಪನ
2. ಸಂಕಲನಾತ್ಮಕ (Summative) ಮೌಲ್ಯಮಾಪನ

**ರೂಪಣಾತ್ಮಕ ಮೌಲ್ಯಮಾಪನ :** ರೂಪಣಾತ್ಮಕ ಮೌಲ್ಯಮಾಪನವನ್ನು ಶಿಕ್ಷಕರು ತರಗತಿಯಲ್ಲಿ ವರ್ಷಪೂರ್ತಿ ಕೈಗೊಳ್ಳುವ ಔಪಚಾರಿಕ ಮತ್ತು ಅನೌಪಚಾರಿಕ ಮೌಲ್ಯಮಾಪನವಾಗಿದೆ. ಇದು ವೈಜ್ಞಾನಿಕ ಪರೀಕ್ಷೆ ಮತ್ತು ಪರಿಹಾರ ಬೋಧನೆಗಳನ್ನೂ ಒಳಗೊಂಡಿರುತ್ತದೆ.

ರೂಪಣಾತ್ಮಕ ಮೌಲ್ಯಮಾಪನದಲ್ಲಿ ತರಗತಿ ಕಾರ್ಯಗಳು, ರಸಪ್ರಶ್ನೆ, ಗೃಹಪಾಠಗಳು, ಯೋಜನೆ, ನಿಯೋಜಿತ ಕಾರ್ಯಗಳು, ಪರೀಕ್ಷೆಗಳು, ಮುಂತಾದ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಬಹುದು. ರೂಪಣಾತ್ಮಕ ಮೌಲ್ಯಮಾಪನವನ್ನು ಮಗುವಿನ ಬೆಳವಣಿಗೆಯ ದೃಷ್ಟಿಯಿಂದ ಅತ್ಯಂತ ಪ್ರಸ್ತುತವಾಗಿದೆ. ರೂಪಣಾತ್ಮಕ ಮೌಲ್ಯಮಾಪನವನ್ನು ವರ್ಷಪೂರ್ತಿ ನಿರಂತರವಾಗಿ ನಡೆಸಬೇಕು. ವರ್ಷದಲ್ಲಿ ನಾಲ್ಕು ಬಾರಿ ದಾಖಲಿಸಬೇಕು.

1. (FA-1) ರೂಪಣಾತ್ಮಕ ಮೌಲ್ಯಮಾಪನ –1 ; ಜುಲೈ ತಿಂಗಳ ಕೊನೆಯವಾರ
2. (FA-2) ರೂಪಣಾತ್ಮಕ ಮೌಲ್ಯಮಾಪನ – 2 ; ಸೆಪ್ಟೆಂಬರ್ ತಿಂಗಳ 2 ನೇ ವಾರ
3. (FA-3) ರೂಪಣಾತ್ಮಕ ಮೌಲ್ಯಮಾಪನ – 3 ; ನವೆಂಬರ್ ತಿಂಗಳ 3ನೆಯ ವಾರ
4. (FA-4) ರೂಪಣಾತ್ಮಕ ಮೌಲ್ಯಮಾಪನ – 4 ; ಫೆಬ್ರವರಿ ತಿಂಗಳ 3ನೆಯ ವಾರ

**ಸಂಕಲನಾತ್ಮಕ ಮೌಲ್ಯಮಾಪನ :** ಸಂಕಲನಾತ್ಮಕ ಮೌಲ್ಯಮಾಪನವನ್ನು ಸೆಮಿಸ್ಟರ್ ಅವಧಿಯ ಅಥವಾ ವರ್ಷದ ಕೊನೆಯಲ್ಲಿ ನಡೆಸಬೇಕು. ಇದು ವರ್ಷದ ಅಥವಾ ಒಂದು ನಿರ್ದಿಷ್ಟ ಅವಧಿಯ ಸಮಗ್ರ ಕಲಿಕೆಯನ್ನು ಪರಿಶೀಲಿಸುವುದರೊಂದಿಗೆ ಶಿಕ್ಷಕರಿಗೆ ಮತ್ತು ಪೋಷಕರಿಗೆ ಆ ಅವಧಿಯಲ್ಲಿ ಆದ ಒಟ್ಟಾರೆ ಕಲಿಕೆಯ ಹಿಮ್ಮಾಹಿತಿಯನ್ನು ನೀಡುತ್ತದೆ. ಶಿಕ್ಷಕರೇ ಪ್ರಶ್ನೆ ಕೋಠಿಯನ್ನು ತಯಾರಿಸಿ ಅದರ ಸಹಾಯದಿಂದ ಪ್ರಶ್ನೆ ಪತ್ರಿಕೆಯನ್ನು ತಯಾರಿಸ ಬಹುದು. ಶಾಲಾ ಹಂತದಲ್ಲಿಯೇ ಪರೀಕ್ಷೆಯನ್ನು ನಡೆಸಬೇಕು. ದರ್ಜಾ ಮಾಪನ–ತಾಳೆ ಪಟ್ಟಿಗಳ ಮೂಲಕ ವಿದ್ಯಾರ್ಥಿಯ ಸಹಪಠ್ಯ ಸಂಯೋಜಿತ ವಿಷಯಗಳನ್ನು ಮಾಪನ ಮಾಡುವುದು.

ಪ್ರತಿ ಸಂಕಲನಾತ್ಮಕ ಮೌಲ್ಯ ಮಾಪನವನ್ನು ತಲಾ 30 ಅಂಕಗಳಿಗೆ ನಡೆಸಬೇಕು. ಇದರಲ್ಲಿ 20 ಅಂಕಗಳನ್ನು ಲಿಖಿತ ಹಾಗೂ 10 ಅಂಕಗಳನ್ನು ಮೌಖಿಕಕ್ಕೆ ನಿಗದಿಪಡಿಸಬೇಕು.

(ಮುಂದುವರಿಯುವುದು...)

# ದೇಶದ ತೊಂದರೆ ಬಗ್ಗೆ ನನಗೇಕೆ ಚಿಂತೆ?

**ಇಂದು ಭಾರತ ಸಂಕಷ್ಟದಲ್ಲಿದೆ. ದೇಶದ ಸುತ್ತ ಶತ್ರುಗಳ ಕಾಟ. ದೇಶದ ಒಳಗೆ ನಕ್ಸಲರು, ಭ್ರಷ್ಟಚಾರಿಗಳು ಇವರ ಕಾಟ. ಹಸಿವು, ಬಡತನ, ಬೆಲೆ ಏರಿಕೆ ಮುಂತಾದವುಗಳಿಂದ ಬಸವಳಿದ ಜನ. ಇಷ್ಟಾದರೂ ಸಾಮಾನ್ಯ ಜನ ದೇಶದ ಬಗ್ಗೆ ಯಾವುದೇ ಕಾಳಜಿ ಇಲ್ಲದೆ ತಾನು ತನ್ನ ಮನೆ, ತನ್ನ ಕುಟುಂಬ ಎಂದು ಕೂಪಮಂಡೂಕಗಳಾಗಿ ಬದುಕುತ್ತಿರುವುದನ್ನು ಕಾಣುತ್ತಿದ್ದೇವೆ. ಇಂತಹವರಿಗಾಗಿ ನಮ್ಮ ದೇಶದ ಖ್ಯಾತ ಯೋಗ ಗುರು ಬಾಬಾ ರಾಮ್ ದೇವ್ ರವರ ಈ ಕೆಳಕಂಡ ಲೇಖನ ಅತ್ಯಂತ ಸೂಕ್ತವಾಗಿದೆ. ಇದನ್ನು ಓದಿದವರು, ಅಮೇರಿಕಾದ ಅಧ್ಯಕ್ಷ ರಾಗಿದ್ದ ದಿವಂಗತ ಕೆನಡಿ .ತನ್ನ ಪ್ರಜೆಗಳಿಗೆ ಹೇಳಿದ "ದೇಶ ನನಗೇನು ಮಾಡಿದೆ ಎನ್ನುವದಕ್ಕಿಂತ ದೇಶಕ್ಕಾಗಿ ನಾನೇನು ಮಾಡಿದೆ" ಎಂಬ ಮಾತು ನಮ್ಮ ನೆನಪಿನಲ್ಲಿದ್ದರೆ ಬದುಕು ಅರ್ಥಪೂರ್ಣವಾದೀತು.**

ಸ್ವದೇಶಿ ಉದ್ಯೋಗ, ಸ್ವದೇಶಿ ಶಿಕ್ಷಣ, ಸ್ವದೇಶೀ ಚಿಕಿತ್ಸಾ ಪದ್ಧತಿ, ಸ್ವದೇಶಿ ತಾಂತ್ರಿಕತೆ, ಸ್ವದೇಶಿ ಜ್ಞಾನ, ಸ್ವದೇಶಿ ಊಟ ತಿಂಡಿ, ಸ್ವದೇಶಿ ಭಾರತೀಯ ಭಾಷೆ, ಸ್ವದೇಶೀ ವೇಶಭೂಷಣ ಮತ್ತು ಸ್ವದೇಶದ ಸ್ವಾಭಿಮಾನವಿಲ್ಲದೆ ವಿಶ್ವದ ಯಾವುದೇ ದೇಶ ಮಹಾನ್ ಆಗಲು ಸಾದ್ಯವಿಲ್ಲ.

ಸ್ವದೇಶಿ ಆಂದೋಲನದಿಂದ ಪ್ರತಿಯೊಬ್ಬ ಭಾರತೀಯನನ್ನು ಮತ್ತು ಸಂಪೂರ್ಣ ಭಾರತವನ್ನು ಸ್ವಾವಲಂಬಿಯನ್ನಾಗಿ ಮಾಡಿ, ಭಾರತವು ವಿಶ್ವದ ಅತ್ಯಂತ ಶಕ್ತಿ ಶಾಲಿ ದೇಶಗಳ ಸಾಲಿನಲ್ಲಿ ಇರಲೆಂದು ಬಯಸುತ್ತಿದ್ದೇವೆ.

ನಾವು ಶಿಕ್ಷಣ ಚಿಕಿತ್ಸೆಗಳಲ್ಲಿ ಸಂಪೂರ್ಣ ಸ್ವದೇಶಿ ಭಾಷೆ, ಸ್ವದೇಶಿ ಸಂಸ್ಕೃತಿ, ಭಾರತೀಯ ಸಂಸ್ಕಾರ, ವೈದಿಕ ಜ್ಞಾನ ಹಾಗೂ ದೇಶದ ಸ್ವಾಭಿಮಾನವನ್ನು ಭಾರತದ ಜನಮಾನಸದಲ್ಲಿ ಜಾಗೃತಿಗೊಳಿಸಿ, ಸಂಪೂರ್ಣ ವಿಶ್ವದಲ್ಲಿ ಒಂದು ಆದರ್ಶ ಭಾರತದ ಪರಿಚಯ ಮಾಡಬಯಸುತ್ತಿದ್ದೇವೆ. 1611ರಲ್ಲಿ ಮಚಲೀಪಟ್ಟನಂನಲ್ಲಿ (ಆಂಧ್ರಪ್ರದೇಶ) ಮತ್ತು 11ನೇ ಜನವರಿ 1613ರಲ್ಲಿ ಸೂರತ್ (ಗುಜರಾತ್) ನಲ್ಲಿ ಮೊಗಲ್ ಶಾಸಕರು ಒಂದು ವಿದೇಶಿ ಕಂಪನಿಗೆ ವ್ಯಾಪಾರ ಮಾಡಲಿಕ್ಕೆ ಅಧಿಕಾರ ನೀಡಿದ್ದರು. ಅದರಿಂದಾಗಿ ಆ ಕಂಪನಿಯವರು ನಿಧಾನವಾಗಿ ದೇಶದ ಶೋಷಣೆ ಮಾಡುತ್ತ, ತಮ್ಮ ಬೇರುಗಳನ್ನು ಗಟ್ಟಿಮಾಡಿಕೊಂಡರು. ಬಂಗಾಳದಲ್ಲಿ 1757ರಲ್ಲಿ ಪ್ಲಾಸಿ ಕದನ ಗೆದ್ದು, ತೆರಿಗೆಯ ಕೆಲಸ ಆರಂಭಿಸಿದರು. 1769–70ರ ಬಂಗಾಳದ ಭೀಕರ ಬರಗಾಲದಲ್ಲಿ ಈ ಕಂಪನಿಗಳು ಪೀಡಿತರಿಗೆ ಸಹಾಯ ಮಾಡುವುದಿರಲಿ ಬದಲಿಗೆ ಇನ್ನಷ್ಟು ತೊಂದರೆಯನ್ನೇ ನೀಡಿದರು. ದೇಶದಲ್ಲಿ ಕ್ಷಾಮವಿದ್ದರು ಕೂಡ ಈ ವಿದೇಶಿ ಕಂಪನಿಗಳು ಸಾಕಷ್ಟು ಲಾಭ ಗಳಿಸಿದ್ದವು. ತಮ್ಮ ದುಷ್ಟತನದಿಂದ 1773ರಲ್ಲಿ ರೆಗ್ಯುಲೇಟರಿ ಆಕ್ಟ್ ನ ಸಹಾಯದಿಂದ ಭಾರತದ ಬಂಗಾಳಕ್ಷೇತ್ರದಲ್ಲಿ ಶಾಸನ ಆರಂಭಿಸಿದರು. ಅಂದರೆ ಒಂದು ವಿದೇಶಿ ವ್ಯಾಪಾರಿ ಕಂಪನಿ ನೋಡ ನೋಡುವಷ್ಟರಲ್ಲಿ ಶಾಸನ ಮಾಡಲಾರಂಭಿಸಿತು. 1615ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಮೊದಲ ಏಜೆಂಟ್ ಥಾಮಸ್ ರೋ ನಿಂದ ಪ್ರಾರಂಭವಾಗಿ ಪ್ರಥಮ ಗೌವರ್ನರ್ ಜನರಲ್ ವಾರನ್ ಹೆಸ್ಟಿಂಗ್‌ನಿಂದ ಹಿಡಿದು ಕೊನೆಯ ಗೌವರ್ನರ್ ಜನರಲ್ ಮೌಂಟ್ ಬ್ಯಾಟನ್‌ವರೆಗೆ ಒಂದು ವಿದೇಶೀ ಕಂಪನಿ ಸುಮಾರು 350 ವರ್ಷಗಳ ವರೆಗೆ ದೇಶದ 278 ಲಕ್ಷ ಕೋಟಿ ರೂಪಾಯಿಗಳ ಸಂಪತ್ತನ್ನು ಲೂಟಿ ಮಾಡಿತು. ಪ್ರಥಮ ವಿದೇಶಿ ಕಂಪನಿ ಈಸ್ಟ್ ಇಂಡಿಯಾ ದೇಶದ ಸಂಪೂರ್ಣ ಹಣ ಹಾಗೂ ವೈಭವವನ್ನು ಲೂಟಿ ಮಾಡಿತಷ್ಟೇ ಅಲ್ಲದೆ ಜೊತೆಗೆ ಭಾರತವನ್ನು ಸುಮಾರು 200 ವರ್ಷಗಳ ವರೆಗೆ ಗುಲಾಮ ದೇಶವನ್ನಾಗಿಯೂ ಮಾಡಿತು. ಇಂದೂ ಕೂಡ ದೇಶದಲ್ಲಿಯ ಸುಮಾರು 5 ಸಾವಿರಕ್ಕಿಂತ ಅಧಿಕ ವಿದೇಶೀ ಕಂಪನಿಗಳು ಶೂನ್ಯ ತಾಂತ್ರಿಕತೆ ಅಂದರೆ ಯಾವು ವಸ್ತುಗಳಲ್ಲಿ ವಿಶೇಷ ತಾಂತ್ರಿಕತೆಯ ಅವಶ್ಯಕತೆ ಇಲ್ಲವೋ ಅಥವಾ ವಿಜ್ಞಾನದ ಉಪಯೋಗವಿಲ್ಲವೋ ಅಂತಹಾ ವಸ್ತುಗಳನ್ನು: ಹಿಟ್ಟು, ಉಪ್ಪು. ನೀರು. ತಂಪುಪಾನೀಯ, ಜ್ಯೂಸ್, ಚಿಪ್ಸ್, ಸಾಬೂನ್, ಎಣ್ಣೆ, ಕ್ರೀಮು, ಚಪ್ಪಲಿ, ಬಟ್ಟೆ ಇತ್ಯಾದಿಗಳನ್ನು ಮಾರಿ ದೇಶದ ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳನ್ನು ಪ್ರತೀವರ್ಷ ಲೂಟಿ ಮಾಡುತ್ತಿವೆ. ಇದು ದೇಶದ ಆರ್ಥಿಕ ಅಭಿವೃದ್ದಿಗೆ ಸಾಕಷ್ಟು ಅಡ್ಡಿಯನ್ನು ಉಂಟುಮಾಡುತ್ತಿದೆ. ದೇಶದ ಒಂದೇ ಒಂದು ರೂಪಾಯಿ ಒಂದು ವೇಳೆ ವಿದೇಶಿ ಬ್ಯಾಂಕ್‌ಗಳಲ್ಲಿ ಸಂಗ್ರಹವಾಗುತ್ತಿದೆ ಎಂದಾದರೆ ಅದು ಸ್ವದೇಶಿ ಬೊಕ್ಕಸಕ್ಕೆ ಆಗುವ ದೊಡ್ಡ ಹಾನಿ. ಮತ್ತು ದೇಶಕ್ಕೆ ಅಪಾಯಕಾರಿ ಕೂಡ, ದೇಶದ ಅರ್ಥವ್ಯವಸ್ಥೆಯೇ ದೇಶದ ಎಲ್ಲಕ್ಕಿಂತ ದೊಡ್ಡ ಶಕ್ತಿಯಾಗಿದೆ

(9ನೇ ಪುಟಕ್ಕೆ.....)

4ನೇ ಪುಟದಿಂದ..... **ಕಾರ್ಯಕರ್ತ**

ಮನಗಂಡ ಸ್ವಾಮಿ ವಿವೇಕಾನಂದರು ಮೇಲಿನ ಉಕ್ತಿಗಳಿಗೆ ಇನ್ನೆರಡನ್ನೂ ಸೇರಿಸಿದುದು ಈಗ ಇತಿಹಾಸ. ಅವೆಂದರೆ **ದೀನ ದೇವೋ ಭವ ಮತ್ತು ದರಿದ್ರ ದೇವೋ ಭವ** ಎಂಬುವು. ದೀನ ಮತ್ತು ದರಿದ್ರರಲ್ಲಿಯೇ ದೇವರು ನೆಲೆಸಿದ್ದಾನೆ. ಅವರ ಸೇವೆ ಮಾಡಿದರೆ ದೇವರು ಪ್ರಸನ್ನನಾಗುತ್ತಾನೆ ಎಂದು ಜನರಿಗೆ ಬೋಧ್ಯವಾಗಿಸಲು ಈ ಎರಡು ಸೂಕ್ತಿಗಳನ್ನು ಅವರು ಜೋಡಿಸಿರುವುದು.

ಇದೀಗ ಹೊಸಬದುಕಿನ, ಹೊಸಯುಗದ ಇಂದಿನ ದಿನಗಳಲ್ಲಿ ಮನುಷ್ಯ ಸಂಘಜೀವಿಯಾಗಿ, ಸಂಘಸಂಸ್ಥೆಗಳ ಮೂಲಕ ಸಾಮಾಜಿಕ ಕಾರ್ಯ ಮಾಡಬೇಕಾದರೆ ಹೊಸದೊಂದು ಧ್ಯೇಯ ವಾಕ್ಯದ ಅವಶ್ಯಕತೆ ಇದ್ದಂತೆ ಭಾಸವಾಗುತ್ತದೆ. ಅದಕ್ಕಾಗಿಯೇ ಈ ಉಲ್ಲೇಖಿತ ಉಕ್ತಿಗಳ ಜತೆಗೆ **ಕಾರ್ಯಕರ್ತ ದೇವೋಭವ** ಎಂದು ಜೋಡಿಸುವುದು.

**ಕಾರ್ಯಕರ್ತ ಯಾರು? ಯಾಕೆ? :–** ನಮ್ಮೆಲ್ಲರ ವೈಯಕ್ತಿಕ ಬದುಕಿಗೆ ನಾವು ನಾವೇ ಕಾರ್ಯಕರ್ತರು. ನಮ್ಮ ವೃತ್ತಿ, ನಮ್ಮ ವಾಹನ, ನಮ್ಮ ಸಂಸಾರ ಇವೆಲ್ಲವೂ ಸುಸಿತ್ಥಿಯಲ್ಲಿರಬೇಕಾದರೆ ಅದಕ್ಕೆಲ್ಲ ಮುಖ್ಯ ಚಾಲಕ ಶಕ್ತಿ ನಾವೇ. ನಮ್ಮ ವೃತ್ತಿ– ಉದ್ಯೋಗವನ್ನು ಎಷ್ಟು ಚೆನ್ನಾಗಿ ನಾವು ಮಾಡುತ್ತೇವೆಯೋ ಅಷ್ಟೇ ಉನ್ನತ ಪ್ರತಿಫಲ ನಮಗೆ ಸಿಗುವುದು. ಆದುರಿಂದ ನಮ್ಮ ಕೆಲಸಕ್ಕೆ ನಾವೇ ಕಾರ್ಯ–ಕರ್ತರು. ಅಂದರೆ ಕೆಲಸ ಮಾಡುವವರು ಎಂದರ್ಥ. ಆದರೆ ನಮ್ಮಂತಹ ಅನೇಕ ಮಂದಿ ಸೇರುವ ಸಂಘ ಸಂಸ್ಥೆಗಳಿಗೆ ನಾವು ಮಾತ್ರವಲ್ಲದೆ ನಮ್ಮ ಜೊತೆ ಹೆಗಲಿಗೆ ಹಗಲುಕೊಟ್ಟು ದುಡಿಯುವ ನಮ್ಮ ಸಹಕಾರಿಗಳ ಸೇವೆ ಪರಿಶ್ರಮ ಅತ್ಯಗತ್ಯ.

ಕಾರ್ಯಮಾಡುವವರೆಲ್ಲರೂ ಕಾರ್ಯಕರ್ತರೆಂದೇ ಕರೆಸಿಕೊಂಡರೂ **'ಕಾರ್ಯಕರ್ತದೇವೋಭವ'** ಎಂಬ ಸೂಕ್ತಿಗೆ ಅನುವು ನೀಡುವ ಕಾರ್ಯಕರ್ತ ಮಾತ್ರ ವಿಶಿಷ್ಟ ಸ್ವಭಾವದ, ನಿರ್ದಿಷ್ಟ ಕಾರ್ಯ ಪದ್ಧತಿಯ ವ್ಯಕ್ತಿ, ಇವನೇ ಒಂದು ಸಂಸ್ಥೆಯ ಶಕ್ತಿ. ಇಂಥವರಿಂದಲೇ ಒಂದು ಸಂಸ್ಥೆಯ ಅಳಿವು ಉಳಿವು. ●

---

8ನೇ ಪುಟದಿಂದ..... **ದೇಶದ ಬಗ್ಗೆ**

ಮತ್ತು ಬೆನ್ನೆಲುಬಾಗಿದೆ. ನಾವು ದೇಶವನ್ನು ಶಕ್ತಿಯುತವನ್ನಾಗಿ ಮಾಡಲಿದ್ದೇವೆ. ವಿದೇಶ ಕಂಪನಿಗಳ ವಸ್ತುಗಳನ್ನು ಕೊಂಡು ದೇಶವನ್ನು ಅಶಕ್ತವನ್ನಾಗಿ ಮಾಡಲು ನಾವು ಬಿಡುವುದಿಲ್ಲ. ವಿದೇಶಿಯರು ನಮ್ಮನ್ನು ಸಾಕಷ್ಟು ಲೂಟಿ ಮಾಡಿದ್ದಾರೆ. ಆದ್ದರಿಂದ ವಿದೇಶಿಯರೊಂದಿಗಿನ ವ್ಯಾಪಾರ, ವಹಿವಾಟುಗಳಿಂದ ವಿದೇಶಿ ಹಣವನ್ನು ನಮ್ಮ ದೇಶದೊಳಕ್ಕೆ ತರುವುದು. ನಿರ್ಯಾತಕ್ಕೆ ಒತ್ತು ನೀಡುವುದು.

ನಮ್ಮ ವಸ್ತುಗಳ ಬಗ್ಗೆ ವಿದೇಶಗಳಲ್ಲಿ ಬೇಡಿಕೆ ಹೆಚ್ಚಿಸುವುದು ಹಾಗೂ ಮಾರುವುದು ಇದೇ ದೇಶದ ಆರ್ಥಿಕ ಸಬಲೀಕರಣಕ್ಕೆ ಇಂದಿನ ಅಗತ್ಯ. ●

---

**'ಜ್ಞಾನವೇ ಶಕ್ತಿ' ಎಂದು ನಾಣ್ಣುಡಿಯೊಂದು ಹೇಳುತ್ತದೆ, ಅಲ್ಲವೇ? ಜ್ಞಾನದ ಮೂಲಕವೇ ಶಕ್ತಿ ಬರುತ್ತದೆ. ತಾನು ಅನಂತ ಶಕ್ತಿ ಮತ್ತು ಸಾಮರ್ಥ್ಯವುಳ್ಳ ವ್ಯಕ್ತಿಯೆಂದು ಪ್ರತಿಯೊಬ್ಬ ಮನುಷ್ಯನೂ ಅರಿತುಕೊಳ್ಳಬೇಕು. ಸಹಜವಾಗಿಯೇ ಅವನು ಸರ್ವಶಕ್ತ ಮತ್ತು ಸರ್ವಾಂತರ್ಯಾಮಿ. ಅದನ್ನು ಅವನು ತಿಳಿದುಕೊಳ್ಳಬೇಕು. ತನ್ನ ಆತ್ಮದ ಬಗ್ಗೆ ಅವನಿಗೆ ಹೆಚ್ಚು ಹೆಚ್ಚು ಅರಿವು ಉಂಟಾದ ಹಾಗೆಲ್ಲಾ, ಅವನು ಈ ಶಕ್ತಿಯನ್ನು ಹೆಚ್ಚು ಹೆಚ್ಚು ಪ್ರಕಟಿಸುತ್ತಾನೆ. ಆಗ ಅವನ ಬಂಧನಗಳೆಲ್ಲ ಕಡಿದು ಹೋಗಿ, ಕಡೆಗೆ ಅವನು ಸ್ವತಂತ್ರನಾಗುತ್ತಾನೆ.**

**ನೀವೆಲ್ಲರೂ ನಿಮ್ಮನ್ನು ಅನಂತ ಸರ್ವಶಕ್ತ ಆತ್ಮವೆಂದು ಚಿಂತಿಸಿ. ಆಗ ನೋಡಿ, ಅದೆಷ್ಟು ಶಕ್ತಿಯು ನಿಮ್ಮಲ್ಲಿ ಪ್ರಕಟವಾಗುವುದೆಂದು.**

**– ಸ್ವಾಮಿ ವಿವೇಕಾನಂದ**

# ಅಪರೂಪ- ಅನುಕರಣೀಯ- ವಿದಾಯ

ಸಾಮಾನ್ಯವಾಗಿ ಶಾಲಾ ಕಾಲೇಜುಗಳ ಮುಖ್ಯಸ್ಥರು ನಿವೃತ್ತಿ ಹೊಂದಿದಾಗ, ಆ ಸಂಸ್ಥೆಗಳ ಅಧ್ಯಾಪಕರೆಲ್ಲರೂ, ಸೇರಿ ಅವರಿಗೆ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಿ, ನಿವೃತ್ತರಾಗಲಿರುವವರ ಕೃತಕ ಮುಖಸ್ತುತಿ ಮಾಡಿ, ಹಾರ ತುರಾಯಿ ಫಲತಾಂಬೂಲ ನೀಡಿ ಕಳಿಸುವುದು ಪದ್ಧತಿ. ಆದರೆ ಮಾಧ್ಯಮಿಕ ಶಿಕ್ಷಕ ಸಂಘದ ಮೈಸೂರು ಜಿಲ್ಲಾ ಅಧ್ಯಕ್ಷರಾದ ಪ್ರಾಂಶುಪಾಲ ಎಂ. ನಾಗರಾಜರವರು ಮೇ 31 ರಂದು ನಿವೃತ್ತರಾದಾಗ ನಡೆದ 'ಆತ್ಮೀಯರಿಗೆ ವಿದಾಯ' ಕಾರ್ಯಕ್ರಮ ಅಪರೂಪದ್ದಲ್ಲದೆ ಅನುಕರಣೀಯವೂ ಹೌದು.

ಶ್ರೀ ಎಂ. ನಾಗರಾಜ್ ಮೈಸೂರಿನ ಪುರಾತನ ವಿದ್ಯಾಸಂಸ್ಥೆ ಮಹಾರಾಜ ಹೈಸ್ಕೂಲ್ ಈಗ – ಮಹಾರಾಜ ಪದವಿಪೂರ್ವ ಕಾಲೇಜಿನ – ಪ್ರಾಂಶುಪಾಲರಾಗಿ ಅಧಿಕಾರ ಸ್ವೀಕರಿಸಿದ್ದು ಕೇವಲ 6 ವರ್ಷಗಳ ಹಿಂದೆ, ಮತ್ತು ಆಗಲೇ ಅವರು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಸಂಪರ್ಕಕ್ಕೆ ಬಂದುದು, ಅದರ ಪರಿಣಾಮ, ಅವರ ಮಾತುಗಳಲ್ಲೇ ಕೇಳಿ. "ನಾನು ಕೇವಲ ಇತ್ತೀಚೆಗೆ ಇಂಥ ವೈಶಿಷ್ಟ್ಯಪೂರ್ಣ ಸಂಘಟನೆಯ ಸಂಪರ್ಕಕ್ಕೆ ಬಂದೆ, ನನಗೆ ಈಗನ್ನಿಸುತ್ತಿದೆ, ನಾನು ಬಹಳ ಮೊದಲೇ ಈ ಸಂಘಟನೆಯ ಸಂಪರ್ಕಕ್ಕೆ ಬಂದಿದ್ದರೆ, ಇನ್ನೂ ಅನೇಕ ಉತ್ತಮ ಕೆಲಸಗಳನ್ನು ಮಾಡಬಹುದಿತ್ತು."

ಶ್ರೀ ನಾಗರಾಜರ ನೇತೃತ್ವದಲ್ಲಿ ಕಾಲೇಜು ಅಭಿವೃದ್ಧಿಯ ಹಾದಿಯಲ್ಲಿ ದಾಪುಗಾಲು ಹಾಕಲು ತೊಡಗಿತು. 1956ರಲ್ಲಿ ಹೈಸ್ಕೂಲಿನ 8ನೇ ತರಗತಿಯ ವಿದ್ಯಾರ್ಥಿಯಾಗಿದ್ದ ನನಗೆ 2011ರಲ್ಲಿ ಶಾಲೆಯ 175ನೇ ಸ್ಥಾಪನಾ ದಿನದ ಉತ್ಸವದಲ್ಲಿ ಭಾಗವಹಿಸಲು ಅವಕಾಶ ದೊರಕಿತು. ಈ ಉತ್ಸವವನ್ನು ಮೂರ್‍ನಾಲ್ಕು ದಿನಗಳ ಕಾಲ ಅತ್ಯಂತ ವಿಜೃಂಭಣೆಯಿಂದ ನಡೆಸಿದರು. ಈ ಸಮಯದಲ್ಲಿ ಅನೇಕ ಶೈಕ್ಷಣಿಕ ವಿಚಾರಗಳ ಬಗ್ಗೆ ಸಂಗೋಷ್ಠಿ, ಚರ್ಚೆ, ಭಾಷಣಗಳು ಮುಂತಾದವು ನಡೆದುದು ತುಂಬಾ ವಿಶೇಷ.

ಗ್ರಾಮೀಣ ಪರಿಸರದಿಂದ ಬಂದ ಶ್ರೀ ನಾಗರಾಜರು ಶಾಲೆಯ ಆವರಣವನ್ನು ಹಸಿರುಮಯಗೊಳಿಸಿದ್ದು ಮತ್ತೊಂದು ವಿಶೇಷ. ಶಾಲೆಗೆ ಕಾಲಿಡುತ್ತಿದ್ದಂತೆ, ತೊನೆದಾಡುತ್ತಿರುವ ಗೊನೆಗಳನ್ನು ಹೊತ್ತ ಬಾಳೆಯ ತೋಟ ಕಣ್ಣಿಗೆ ಹಬ್ಬ. ಅಲ್ಲಿದ್ದ ಅನೇಕ ಹೂಗಿಡಗಳ ನಸುಗಂಪು ಮನಸ್ಸಿಗೆ ಆನಂದ.

ಇಂಥ ಪ್ರಾಂಶುಪಾಲ ನಾಗರಾಜರು ಇದೇ ಮೇ 31 ರಂದು ನಿವೃತ್ತರಾದರು. ನಿವೃತ್ತಿಗೆ ಮುಂಚೆ ಮೇ 26 ರಂದು ಅವರ ಕಾಲೇಜಿನ ಸಭಾಂಗಣದಲ್ಲಿ ತಮ್ಮ ಸಹೋದ್ಯೋಗಿಗಳು, ಶಿಕ್ಷಕ ಗೆಳೆಯರಿಗೆ ವಿದಾಯ ಕಾರ್ಯಕ್ರಮ ಏರ್ಪಡಿಸಿದ್ದರು. 250 ಶಿಕ್ಷಕರು ಸೇರಿದ್ದ ಈ ಸಮಾರಂಭದಲ್ಲಿ ಮೈಸೂರಿನವರೇ ಆದ ಕುಟುಂಬ ಪ್ರಬೋಧನ ಸಂಸ್ಥೆಯ ಪ್ರಮುಖ ಶ್ರೀ ಸು. ರಾಮಣ್ಣನವರು ಮುಖ್ಯ ಅತಿಥಿಗಳಾಗಿ ಬಂದು " ನಾವು ಮತ್ತು ನಮ್ಮ ಮನೆ" ಎಂಬ ವಿಷಯವಾಗಿ ಎಲ್ಲರ ಮನಮುಟ್ಟುವಂತೆ ಮಾತನಾಡಿದರು. ತಮ್ಮ ಭಾಷಣಕ್ಕೆ ಮುನ್ನ ಶ್ರೀ ರಾಮಣ್ಣನವರು ತಮ್ಮ ಆಶಯವನ್ನು ವ್ಯಕ್ತ ಪಡಿಸುತ್ತಾ ಸಾಮಾನ್ಯವಾಗಿ 60 ಕ್ಕೆ "ಅರಳು ಮರಳು" ಎಂಬ ಮಾತಿದೆ. ಇಲ್ಲಿ ಅರಳು ಮತ್ತು ಮರಳಿನ ಅರ್ಥವನ್ನು ನಾವು ಸರಿಯಾಗಿ ತಿಳಿಯಬೇಕು. 60ರ ನಂತರ ನಮ್ಮ ಜೀವನ ಸುಂದರಪುಷ್ಪವಾಗಿ ಅರಳುತ್ತದೆ. ಅರಳಿದ ಹೂವನ್ನೇ ನಾವು ಪರಮೇಶ್ವರನ ಚರಣಗಳಿಗೆ ಸಮರ್ಪಿಸುವುದು. ಹಾಗೇ 60 ರ ನಂತರ ನಮ್ಮ ಜೀವನವನ್ನು ಸಮಾಜ ಪುರುಷನ ಸೇವೆಗೆ ಅರ್ಚನೆಗೆ ಮೀಸಲಿಡಬೇಕು. ಮರಳೆಂದರೆ ನಾವು ಹಿಂದಿರುಗುವುದು ಎಂದರ್ಥ. ಎಲ್ಲಿಗೆ ? ನಮಗೆ ಇಷ್ಟವಾದ ಕಾರ್ಯಕ್ಷೇತ್ರಕ್ಕೆ ಶ್ರೀ ನಾಗರಾಜರು ಈ ಮಾತಿಗೆ ಕೂಡಲೇ ಪ್ರತಿಕ್ರಿಯಿಸುತ್ತಾ ನನ್ನ ಬದುಕಿನ ಉಳಿದ ಭಾಗವನ್ನು ಶಿಕ್ಷಕ ಸಂಘದ ಮೂಲಕ ಶಿಕ್ಷಣದ ಶಿಕ್ಷಕರ ಕಲ್ಯಾಣಕ್ಕೆ ಮೀಸಲಿಡುವೆ, ಎಂದು ಘೋಷಿಸಿದ್ದು ಎಲ್ಲರ ಶ್ಲಾಘನೆಗೆ ಪಾತ್ರವಾಯಿತು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪ್ರಮುಖರಾದ ಶ್ರೀ.ಕೃ ನರಹರಿ, ಶ್ರೀ ಬಾಲಕೃಷ್ಣ ಭಟ್, ಶ್ರೀ ಜಿ.ಎಸ್. ಕೃಷ್ಣಮೂರ್ತಿ ಶ್ರೀ ಹೆಚ್.ಎನ್.ಆರ್, ಶ್ರೀಮತಿ ಸೀತಾಲಕ್ಷ್ಮಿ, ಹಾಗೂ ಶಾಸಕರಾದ ಶ್ರೀ ಗೋ. ಮಧುಸೂದನ್, ಶ್ರೀ ತೋಂಟದಾರ್ಯ ಮುಂತಾದವರು ಜೊತೆಗೆ ಇದೇ ಶಾಲೆಯ ಹಿರಿಯ ವಿದ್ಯಾರ್ಥಿ ಹಾಗೂ ಮಾಜಿ ಪ್ರಾಂಶುಪಾಲರಾದ ಶ್ರೀ ಶ್ರೀಧರ್‌ರಾಜೇ ಅರಸ್ ರವರು ಮತ್ತು ಶ್ರೀಮತಿ ನಾಗರಾಜ್ ರವರು ಉಪಸ್ಥಿತರಿದ್ದರು.

ಶಿಕ್ಷಕ ಸಂಘದ ವಿಭಾಗ ಕಾರ್ಯದರ್ಶಿಗಳಾದ ಶ್ರೀ ಜಿ.ಎಸ್. ನಂಜುಡಸ್ವಾಮಿರವರು ಕಾರ್ಯಕ್ರಮವನ್ನು ನಿರೂಪಿಸಿದರು. ಇತಿಹಾಸ ಸಂಕಲನೆಯ ಯೋಜನೆಯ ಕಾರ್ಯಕರ್ತರಾದ ಶ್ರೀ ನಾಗರಾಜರವರು ಎಲ್ಲರನ್ನೂ ಸಭೆಗೆ ಸ್ವಾಗತಿಸಿದರು. ಕಾರ್ಯಕ್ರಮದ ಸಂಯೋಜಕರು ಮತ್ತು ಶಿಕ್ಷಕ ಸಂಘದ ಪ್ರಧಾನ ಕಾರ್ಯದರ್ಶಿಯಾದ ಶ್ರೀ ಶಿವಾನಂದ ಸಿಂಧನಕೇರಾರವರು ಆಭಾರ ಸಲ್ಲಿಸಿದರು. ಭಾಗವಹಿಸಿದ್ದ ಎಲ್ಲರಿಗೂ ಬಾಳೆಲೆ ಊಟದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

**ವರದಿ : ಎಚ್ಚೆನ್ನಾರ್**

# ಚಿತ್ರ ಸುದ್ದಿ



ಸಂಘದ ಪದಾಧಿಕಾರಿಗಳು, ಅಧ್ಯಕ್ಷ ಶ್ರೀ ಕೆ. ಬಾಲಕೃಷ್ಣ ಭಟ್‌ರವರ ನೇತೃತ್ವದಲ್ಲಿ ಶಿಕ್ಷಣ ಸಚಿವರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸುತ್ತಿರುವುದು.



ಮನವಿ ಪತ್ರ ಓದುತ್ತಿರುವ ಶ್ರೀ ಕಿಮ್ಮನೆ. ಜೊತೆಯಲ್ಲಿ ಶ್ರೀ ಅರುಣಾ ಶಹಾಪುರ, ಎಂಎಲ್‌ಸಿ., ಶ್ರೀ ಚಿದಾನಂದ ಪಾಟೀಲ ಹಾಗೂ ಶ್ರೀ ವರದರಾಜು.



ಮಹಾಸಂಘದ ಸಮಾರೋಪ ಸಮಾರಂಭವನ್ನು ರಾಷ್ಟ್ರೀಯ ಅಧ್ಯಕ್ಷರಾದ ಡಾ. ವಿಮಲ್ ಪ್ರಸಾದ್ ಅಗರ್‌ವಾಲ್‌ರವರು ದೀಪ ಬೆಳಗಿ ಪ್ರಾರಂಭಿಸುತ್ತಿರುವುದು.



ಮಹಾಸಂಘವು ಹೊರತಂದ 'ಕಾಶ್ಮೀರ ಸಮಸ್ಯೆಯೋ, ದೆಹಲಿ ಸಮಸ್ಯೆಯೋ' ಪುಸ್ತಕದ ಬಿಡುಗಡೆ.



ಸಮಾರೋಪ ಸಮಾರಂಭದ ಮುಖ್ಯ ಅತಿಥಿ ಶ್ರೀ ಅರುಣ್ ಕುಮಾರ್‌ರವರು ಮಾತನಾಡುತ್ತಿರುವುದು.



ದೇಶಾದ್ಯಂತ ಆಗಮಿಸಿದ್ದ ಪ್ರತಿನಿಧಿಗಳ ಸಮೂಹ

# ಪ್ರೇರಣಾದಾಯಿ ಘಟನೆ



ಸರ್. ಎಂ. ವಿಶ್ವೇಶ್ವರಯ್ಯರವರದ್ದು, ಅಹಂಕಾರವಿಲ್ಲದ ಆತ್ಮ ಗೌರವ. ಅದೇ ರೀತಿ ನಿಶ್ಚಲ, ನಿರ್ಭಯ ದೇಶಾಭಿಮಾನ. ಆಂಗ್ಲರು ಇಲ್ಲಿ ಮಹಾಪ್ರಭುಗಳೆಂದು ಮೆರೆಯುತ್ತಿದ್ದ ಕಾಲ. ಮೈಸೂರಿನ ಅರಮನೆಯಲ್ಲಿ ದಸರಾ ಹಬ್ಬದ ಕಾಲದಲ್ಲಿ ಮಹಾರಾಜರ ದರ್ಬಾರ್– ರಾಜಸಭೆ ನಡೆಯುತ್ತಿತ್ತು. ಐರೋಪ್ಯರಿಗಾಗಿ ದರ್ಬಾರು ನಡೆಯುವ ದಿನ. ಐರೋಪ್ಯರು ಕುರ್ಚಿಗಳ ಮೇಲೆ ಕುಳಿತುಕೊಳ್ಳುವರು, ಭಾರತೀಯರು ಕೆಳಗೆ ಕುಳಿತುಕೊಳ್ಳಬೇಕು. 1910ರಲ್ಲಿ ಮೊದಲ ಬಾರಿಗೆ ವಿಶ್ವೇಶ್ವರಯ್ಯನವರು ದರ್ಬಾರಿಗೆ ಹೋದರು. ಕುಳಿತು ಕೊಳ್ಳಲು ಏರ್ಪಾಟು ನೋಡಿ ಬೇಸರವಾಯಿತು. ಮರು ವರ್ಷ ಹೋಗಲಿಲ್ಲ. ಅರಮನೆಯವರು ವಿಚಾರಿಸಿದಾಗ ಕಾರಣವನ್ನು ತಿಳಿಸಿದರು. ಮಾರನೆಯ ವರ್ಷದಿಂದ ಎಲ್ಲರಿಗೂ ಕುರ್ಚಿಯ ವ್ಯವಸ್ಥೆಯಾಯಿತು. ಬ್ರಿಟೀಷ್ ಅಧಿಕಾರಿಯೊಬ್ಬ ಮಹಾರಾಜರ ದರ್ಬಾರಿನಲ್ಲಿ ತನ್ನ ಕುರ್ಚಿಯ ಎತ್ತರ ಹೆಚ್ಚು, ಆದುದರಿಂದ ಪಾದಗಳನ್ನು ಇಟ್ಟುಕೊಳ್ಳಲು ಮೆತ್ತನೆಯ ದಿಂಬು ಬೇಕು ಎಂದು ಕೇಳಿದ. 'ಎಂ.ವಿ.' ಅವನ ಕುರ್ಚಿಯ ಕಾಲನ್ನು ಸ್ವಲ್ಪ ಕತ್ತರಿಸಿ, ಎತ್ತರ ಇಳಿಸಿದೆ ಎಂದು ಉತ್ತರ ಬರೆದರು. 1944 ರಲ್ಲಿ ಒಂದು ಸಮ್ಮೇಳನ ನಡೆಯಬೇಕಾಗಿತ್ತು. ನಡೆಸುವ ಸಂಘದ ಅಧ್ಯಕ್ಷರು ವಿಶ್ವೇಶ್ವರಯ್ಯನವರು. ಅಧಿವೇಶನವನ್ನು ಬಿರಾರಾ ಪ್ರಾಂತದ ಗವರ್ನರ್ ಅವನೂ ಇಂಗ್ಲಿಷರವನು– ಪ್ರಾರಂಭ ಮಾಡಬೇಕು (ಆಗಿನ ಕಾಲದ ಬಿಳಿಯ ಗವರ್ನರಿಗೆ ಅಸಾಧಾರಣ ಅಧಿಕಾರ, ವೈಭವ.) ಭಾರತಕ್ಕೆ ರಾಷ್ಟ್ರೀಯ ಸರ್ಕಾರವಿರಬೇಕು ಎಂಬ ನಿರ್ಣಯ ಸಮ್ಮೇಳನದ ಮುಂದೆ ಬರಬೇಕಾಗಿತ್ತು. ಅಂತಹ ನಿರ್ಣಯ ಬರುವುದಾದರೆ ತಾನು ಬರುವುದೇ ಇಲ್ಲ ಎಂದ ಗವರ್ನರ್, ವಿಶ್ವೇಶ್ವರಯ್ಯನವರು ಹೇಳಿದರು: 'ನಾವೇಕೆ ಕಾಯಬೇಕು? ಉದ್ಘಾಟನೆಯೇ ಬೇಡ, ಸಮ್ಮೇಳನ ನಡೆಸೋಣ'. ಅವನಿಲ್ಲದೆ ಸಮ್ಮೇಳನ ನಡೆಯಿತು.

Reg. No. RNI 45459/85
CPMG/KA/BGS-125/2012-14
Posted at Bangalore GPO
Bangalore - 560 001

JUNE 2013
Date of Posting
20th or 21st of every month

**ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ**

D.P.I. (Sepecial) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ ''ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ'' ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.

srushtidesigns@gmail.com